2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**129/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಹೆಚ್.ಪಿ. ರಘು | ಪಿಡಬ್ಲ್ಯೂ - 1 |
| ತಂದೆಯ ಹೆಸರು | - | ಪದ್ಮೇಗೌಡ | ಸಿಡಬ್ಲ್ಯೂ - 1 |
| ವಯಸ್ಸು | - | 52 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಹಳೆಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | |

ದಿನಾಂಕಃ 17-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ.
2. ದಿಃ 23.02.2013 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಹಳೆಕೆರೆ ಗ್ರಾಮದ ಸರ್ವೆ ನಂಬರ್ 47 ರಲ್ಲಿ 30 ಗಂಟೆ ಸ್ಮಶಾನದ ಜಾಗದ ಸಲುವಾಗಿ ಕಂದಾಯ ಅಧಿಕಾರಿಯಾದ ಗ್ರಾಮ ಲೆಕ್ಕಾಧಿಕಾರಿ ಕಲ್ಲೇಶ್ ಎಂಬುವವರು ಪೊಲೀಸರ ಜೊತೆ ಬಂದಿದ್ದು ನಾವು ಗ್ರಾಮಸ್ಥರೆಲ್ಲರು ಸದರಿ ಜಾಗದಲ್ಲಿ ಸೇರಿದ್ದೆವು. ಸದರಿ ಜಾಗದಲ್ಲಿ ಮರ ಗಡಿದ ಜೊತೆ ಕಾಫಿ ಬೆಳೆಯು ಸಹ ಇತ್ತು. ಅದನ್ನು ತಹಶೀಲ್ದಾರರು ಕಾನೂನು ಪ್ರಕಾರ ಪೊಲೀಸ್ ಇಲಾಖೆಯವರ ಸಹಕಾರದೊಂದಿಗೆ ಸಂಬಂಧಪಟ್ಟ

ಅಧಿಕಾರಿಗಳಿಗೆ ಕೊಯಿಲು ಮಾಡಲು ಆದೇಶ ಮಾಡಿದ್ದರು. ಅದರಂತೆ ಕೂಲಿ ಕಾರ್ಮಿಕರು ಸದರಿ ಜಾಗದಲ್ಲಿ ಬೆಳೆದಿದ್ದ ಬೆಳೆಗಳನ್ನು ಕೊಯಿಲು ಮಾಡಲು ಆರಂಭಿಸಿದ್ದರು. ಆ ಸಂದರ್ಬಧಲ್ಲಿ ನಾನು ಸಹ ಇತರ ಗ್ರಾಮಸ್ಥರೊಂದಿಗೆ ಆ ಜಾಗದಲ್ಲಿ ಇದ್ದೆನು. ಆ ಸಮಯದಲ್ಲಿ 1 ನೇ ಆರೋಪಿ ಪ್ರಸನ್ನ ಈತನು ತನ್ನ ವಾಹನ ಸಂಖ್ಯೆ ಕೆ.ಎ.18/ಎಂ.100 ರಲ್ಲಿ ಸದರಿ ಜಾಗಕ್ಕೆ ಏಕಾಏಕಿ ಬಂದು ನನ್ನ ಮೇಲೆ ತನ್ನ ಕಾರನ್ನು ಹತ್ತಿಸಲು ಪ್ರಯತ್ನಿಸಿದನು. ನಾನು ತಪ್ಪಿಸಿಕೊಂಡೆನು ಮತ್ತು ಇತರೆ ಗ್ರಾಮಸ್ಥರು ಅಲ್ಲಿಂದ ಓಡಿ ಹೋದರು. 1 ನೇ ಆರೋಪಿ ಪ್ರಸನ್ನ ನು ನನ್ನ ಮೇಲೆ ಕಾರನ್ನು ಹತ್ತಿಸುವ ಸಂದರ್ಭದಲ್ಲಿ ಉಳಿದ ಆರೋಪಿಗಳು ಸಹ ಸ್ಥಳದಲ್ಲಿಯೇ ಇದ್ದರು. ನಂತರ 1 ನೇ ಆರೋಪಿ ಪ್ರಸನ್ನ ನ್ನು ನನ್ನ ಕುರಿತು ಸೂಳೆ ಮಗನೆ, ಬೋಳಿ ಮಗನೆ ಎಂದು ಬೈದು ಮೃತ 2 ನೇ ಆರೋಪಿಗೆ ಕತ್ತಿ ತೆಗೆದುಕೊಂಡು ಬಾ ಇತನನ್ನು ಕೊಲೆ ಮಾಡೊಣ ಎಂದು ಹೇಳಿದನು. ನಂತರ 4 ನೇ ಆರೋಪಿ ತಮ್ಮ ಮನೆಗೆ ಹೋಗಿ 2 ಕತ್ತಿಗಳನ್ನು ತೆಗೆದುಕೊಂಡು ಬಂದು 2 ನೇ ಆರೋಪಿ ಮತ್ತು 3 ನೇ ಆರೋಪಿಗಳಿಗೆ ಕೊಟ್ಟು ನನ್ನನ್ನು ಕೊಲೆ ಮಾಡಲು 4 ನೇ ಆರೋಪಿಯು ಪ್ರೇರೆಪ್ಪಿಸಿದರು. ನಂತರ 1 ನೇ ಆರೋಪಿ ಪ್ರಸನ್ನನು 2 ನೇ ಆರೋಪಿಯ ಹತ್ತಿರವಿದ್ದ ಕತ್ತಿಯನ್ನು ಕಸಿದುಕೊಂಡು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ನನ್ನ ಕುತ್ತಿಗೆಗೆ ಅದರಿಂದ ಏಟು ಹಾಕಲು ಕತ್ತಿಯನ್ನು ಬೀಸಿದರು ಆ ಸಮಯದಲ್ಲಿ ನನ್ನ ಎಡಗೈಯನ್ನು ಅಡ್ಡ ಮಾಡಿದಾಗ ನನ್ನ ಎಡಗೈನ ಹೆಬ್ಬೆರಳು ಮತ್ತು ಮಧ್ಯೆ ಬೆರಳಿಗೆ ರಕ್ತಗಾಯವಾಯಿತು. ನಂತರ 3 ನೇ ಆರೋಪಿ ಕತ್ತಿ ಮತ್ತು ದೊಣ್ಣೆಯಿಂದ ನನ್ನ ಬಲಗಾಲಿನ ಚಿಪ್ಪಿಗೆ ಹೊಡೆದನು. ಅದನ್ನು ನೋಡಿ ಸ್ಥಳದಲ್ಲಿ ಇದ್ದ ನನ್ನ ತಮ್ಮನು ಬಿಡಿಸಲು

ಬಂದಾಗ 3 ನೇ ಆರೋಪಿಯು ನನ್ನ ತಮ್ಮನ ಹಿಮ್ಮಡಿ ಕಾಲಿಗೆ ಸದರಿ ಕತ್ತಿ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದನು.

3. ಸದರಿ ಆರೋಪಿಗಳು ನನ್ನನ್ನು ಅಲ್ಲದೇ ವೆಂಕಟೇಶ, ರಾಕೇಶ, ಸತೀಶ ಮತ್ತು ಪೂರ್ಣೇಶ ಇವರಿಗಳಿಗೂ ಕೂಡ ದೊಣ್ಣೆ ಮತ್ತು ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ಅವರಲ್ಲಿ ಪೂರ್ಣೇಶನಿಗೆ ಕಾಲಿಗೆ ಏಟಾಗಿತ್ತು. ಆ ಜಾಗದಲ್ಲಿ ನೆರೆದಿದ್ದ ಗ್ರಾಮಸ್ಥರು ನಮ್ಮನ್ನು ಆರೋಪಿಗಳ ಹಲ್ಲೆಯಿಂದ ರಕ್ಷಿಸಿ ನನ್ನನ್ನು ಮತ್ತು ಪೂರ್ಣೇಶ ರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು.

4. ನಾನು ಆಸ್ಪತ್ರೆಗೆ ಹೋಗುವ ಸಂದರ್ಭದಲ್ಲಿ 1 ನೇ ಆರೋಪಿ ಪ್ರಸನ್ನ ನ್ನು ನನ್ನನ್ನು ಕುರಿತು ಕೋಪಿಯಿಂದ ನನ್ನನ್ನು ಇಂದಲ್ಲ ನಾಳೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದನು. ಆರೋಪಿತರು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ.

5. ಈ ಕುರಿತಂತೆ ನಾನು ಗೋಣಿಬೀಡು ಪೊಲೀಸ್ ಠಾಣೆಯ ಪೊಲೀಸರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಹೇಳಿಕೆ ದೂರನ್ನು ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

6. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿದಾಗ ನನ್ನ ಕೈಬೆರಳುಗಳಿಗೆ ಆದ ಗಾಯದಿಂದ ರಕ್ತವು ಸೋರಿದ್ದು ಅದು ನನ್ನ ಶರ್ಟು ಮತ್ತು ಪ್ಯಾಂಟಿಗೆ ಹತ್ತಿಕೊಂಡಿತ್ತು. ಸದರಿ ಶರ್ಟು ಮತ್ತು ಪ್ಯಾಂಟ್ ನ್ನು ಪೊಲೀಸರಿಗೆ ನೀಡಿರುತ್ತೇನೆ. ಅಲ್ಲದೇ ಪುರ್ಣೇಶ್ ರವರ ಮೇಲೆ ಆದ ಹಲ್ಲೆಯಿಂದ

ರಕ್ತವು ಸೋರಿದ್ದು ಅವರ ಶರ್ಟು ಮತ್ತು ಪ್ಯಾಂಟ್ ಗೂ ರಕ್ತವು ಹತ್ತಿಕೊಂಡಿದ್ದು ಅವರ ಶರ್ಟು ಮತ್ತು ಪ್ಯಾಂಟ್ ಗಳನ್ನು ಸಹ ಪೊಲೀಸರು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾನು ನನ್ನ ಬಾಬ್ತು ಆದ ಶರ್ಟು, ಬನಿಯನ್ ಮತ್ತು ಪ್ಯಾಂಟ್ ಪೊಲೀಸರಿಗೆ ಅಮಾನತ್ತು ಮಹಜರ್ ಮೂಲಕ ನೀಡಿರುತ್ತೇನೆ. ಸದರಿ ಬಟ್ಟೆ ಅಮಾನತ್ತು ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಮ್ಮ ಮೇಲೆ ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ್ದ ಕತ್ತಿಗಳು, ದೊಣ್ಣೆ ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ 2 ಕತ್ತಿಗಳು ಇದ್ದು ಅವುಗಳ ಪೈಕಿ ಒಂದು ಮೊಹರು ಮಾಡಿದ ಚೀಲದಲ್ಲಿ ಇರುತ್ತದೆ. ಸದರಿ ಮೊಹರು ಮಾಡಿದ ಚೀಲವನ್ನು ಸಾಕ್ಷಿ, ಆರೋಪಿ ಮತ್ತು ಉಬಯ ಪಕ್ಷದವರ ಸಮಕ್ಷಮ ತೆರೆಯಲಾಯಿತು. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಿಂದ 1 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ. ಅದನ್ನು ಈಗ ಮು.ಮಾ.1 ಎಂದು ಗುರುತಿಸಲಾಯಿತು. ಇನ್ನೊಂದು ಕತ್ತಿಯನ್ನು ತೆಗೆದು ತೋರಿಸಿದ್ದು ಅದರಿಂದ 3 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ. ಅದನ್ನು ಈಗ ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ದೊಣ್ಣೆಯನ್ನು ಗುರುತಿಸಿದ್ದು ಅದರಿಂದ 3 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ. ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಹಿಡಿ ಕಲ್ಲನ್ನು ನೋಡಿ ಗುರುತಿಸಿದ್ದು ಅದರಿಂದ 3 ನೇ ಆರೋಪಿಯು ನನ್ನ ಮೇಲೆ ಹಲ್ಲೆ

ಮಾಡಿರುತ್ತಾನೆ. ಅದನ್ನು ಮು.ಮಾ.4 ಎಂದು ಗುರುತಿಸಲಾಯಿತು. ನನಗೆ ಸಂಬಂಧಿಸಿದ ರಕ್ತಮಯವಾದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಹಾಗೆಯೇ ಬನಿಯನ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.6 ಎಂದು ಗುರುತಿಸಲಾಯಿತು. ಹಾಗೆಯೇ ಪ್ಯಾಂಟ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.7 ಎಂದು ಗುರುತಿಸಲಾಯಿತು.

7. ನಂತರ ಇದರ ಕುರಿತಂತೆ ನಾನು ಪೊಲೀಸರಿಗೆ ಮತ್ತೊಮ್ಮೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 3 ನೇ ಆರೋಪಿಗಳೇ ನನ್ನ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ</u>

8. ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮದ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ

ದಿನಾಂಕಃ 17-01-2019 ರಂದು ಮಧ್ಯಾಹ್ನ 3 ಗಂಟೆಗೆ ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ

9. ನಮ್ಮ ಕುಟುಂಬಕ್ಕೂ ಮತ್ತು ಆರೋಪಿ ಪ್ರಸನ್ನ ರವರ ಕುಟುಂಬಕ್ಕೂ ಮೊದಲಿನಿಂದ ವೈಮನಸ್ಸು ಇದೆ ಎಂದರೆ ಸುಳ್ಳು, ಈ ಘಟನೆಯಾದ ನಂತರ ಇರುತ್ತದೆ. ಈ ಘಟನೆಯಾಗುವ ಮುನ್ನ 1 ನೇ ಆರೋಪಿ ಪ್ರಸನ್ನ ರವರು ನನ್ನ ಮೇಲೆ ನ್ಯಾಯಾಲಯದಲ್ಲಿ 3 ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸ್ಮಶಾನದ ಜಾಗದ ಕುರಿತಂತೆ ನಮ್ಮ ಊರಿನವರ ಮೇಲೆ ಪ್ರಕರಣ ದಾಖಲಿಸಿರಬಹುದು. ಅದರಲ್ಲಿ ನನ್ನ ಹೆಸರು ಇದ್ದರು ಇರಬಹುದು. ರಸ್ತೆ ಬಾಬ್ತು ಸಂಬಂಧಿಸಿದಂತೆ ಸದರಿ 1 ನೇ ಆರೋಪಿ ಪ್ರಕರಣ ದಾಖಲಿಸಿದ್ದು ಅದರಲ್ಲಿ ನನ್ನ ಹೆಸರು ಇದೆ ಎಂದರೆ ಸುಳ್ಳು, ನಾನು, ಪ್ರಾಸಾ.2 ಮತ್ತು 3 ಅಣ್ಣತಮ್ಮಂದಿರು ಎಂದರೆ ಸರಿ. ಮತ್ತು ನಾವು ಬೇರೆ ಬೇರೆ ಇರುತ್ತೇವೆ. ಪ್ರಾಸಾ.3- ವೆಂಕಟೇಶ್ ವಿರುದ್ಧ 1 ನೇ ಆರೋಪಿಯು ಹಣ ವಸೂಲಾತಿ ಸಂಬಂಧಿಸಿದಂತೆ ಒಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳನ್ನು ಪೊಲೀಸರ ಮುಂದೆ ನೀಡಿದ ದೂರಿನಲ್ಲಿ ತಿಳಿಸಿರುತ್ತೇನೆ. ಸದರಿ ನಿ.ಪಿ.1 ದೂರನ್ನು ನಾನು ಬರೆದುಕೊಟ್ಟು ಕಳುಹಿಸಿದ್ದು, ಅದನ್ನು ನನ್ನ ಸಹೋದರನಾದ ಪ್ರಾಸಾ.2 ಪೂರ್ಣೇಶ್ ರವರು ಮೂಡಿಗೆರೆಯಲ್ಲಿ ಟೈಪ್ ಮಾಡಿಸಿ ತಂದು

ಕೊಟ್ಟಿರುತ್ತಾನೆ. ಸದರಿ ಜಾಗವು ಮಡಿವಾಳ ಸಮಾಜ ಮತ್ತು ಸಾರ್ವಜನಿಕರಿಗೆ ಸ್ಮಶಾನಕ್ಕಾಗಿ ಮಿಸಲಾಗಿರುತ್ತದೆ. ನಾನು ಮತ್ತು ನನ್ನ ಸಹೋದರರು ಇಬ್ಬರು ಆ ಜನಾಂಗಕ್ಕೆ ಸೇರಿಲ್ಲ ಎಂದರೆ ಸರಿ.

10. ಘಟನೆ ನಡೆದ ದಿನ ಸುಮಾರು 10 ಜನ ಸದರಿ ಜಾಗದಲ್ಲಿ ಸೇರಿದ್ದರು. ಆ ಸಮಯದಲ್ಲಿ ಮಡಿವಾಳಶೆಟ್ಟಿ ಸಮಾಜಕ್ಕೆ ಸೇರಿದ 8 ರಿಂದ 10 ಜನ ಇದ್ದರು. ಆ ಸಮಯದಲ್ಲಿ 1 ನೇ ಆರೋಪಿಯ ವಾಹನವನ್ನು ನಾನು ಮತ್ತು ಇತರರು ಸೇರಿ ನಷ್ಟ ಉಂಟು ಮಾಡಿದ್ದರ ಕುರಿತಾಗಿ 2 ನೇ ಆರೋಪಿ ನನ್ನ ಮತ್ತು ಇತರ 11 ಜನರ ಮೇಲೆ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ಪ್ರಸನ್ನ ರವರು ಗಾಯಗೊಂಡು ಚಿಕಿತ್ಸೆ ಪಡೆದುಕೊಂಡಿದ್ದು ಸದರಿಯವರು ಸಾಕ್ಷಿಯಾಗಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 47 ರಲ್ಲಿ 2 ನೇ ಆರೋಪಿಯವರಿಗೆ ಸರ್ಕಾರದಿಂದ ಜಾಗ ಮುಂಜೂರಾಗಿದೆ ಎಂದರೆ ಸರಿ. ಆ ಜಾಗದಲ್ಲಿ ಸದರಿ ಆರೋಪಿಯು ಕಾಫಿ ಬೆಳೆದು ಸಾಗವಳಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 47 ರ ಪಕ್ಕದಲ್ಲಿ ನನ್ನ ಸಹೋದರರ ಜಮೀನು ಇರುತ್ತದೆ. ಆದರೆ 1 ನೇ ಆರೋಪಿಯ ಜಮೀನು ಆ ಸರ್ವೆ ನಂಬರ್ 47 ಅಕ್ಕ ಪಕ್ಕದಲ್ಲಿ ಇರುವುದಿಲ್ಲ. ಘಟನೆ ನಡೆದ ಸಂದರ್ಭದಲ್ಲಿ ಗ್ರಾಮ ಲೆಕ್ಕಾಧಿಕಾರಿ, ಒಬ್ಬ ಎ.ಎಸ್.ಐ ಮತ್ತು ಒಬ್ಬ ಪಿ.ಸಿ. ಇದ್ದು ಅವರ ಮೇಲೆ ಉಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನೆ ಅರ್ಜಿ ದಾಖಲಾಗಿದ್ದು ಅದರ ಕುರಿತಂತೆ ಸದರಿಯವರು ಸದರಿ ಸ್ಥಳದಿಂದ ವಾಪಸ್ಸು ಹೋಗಲು ತಯಾರಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರಸನ್ನ ರವರು ಸದರಿ ಅಧಿಕಾರಿಗಳಿಗೆ ಉಚ್ಚ ನ್ಯಾಯಾಲಯದಿಂದ ಬಂದ ನ್ಯಾಯಾಂಗ

ನಿಂದನೆ ಅರ್ಜಿಯ ಬಗ್ಗೆ ತಿಳಿಸಿದರು ಎಂದರೆ ಸರಿಯಲ್ಲ. ಸರ್ವೇ ನಂಬರ್ 47 ರಲ್ಲಿ ಸ್ಮಶಾನ ಜಾಗ ಮತ್ತು 2 ನೇ ಆರೋಪಿಗೆ ಬಂದಂತಹ ಜಾಗಗಳು ದುರಸ್ತಿಯಾಗಿದ್ದು, ನಂತರ ಸ್ಮಶಾನ ಜಾಗಕ್ಕೆ ಹೊಸ ನಂಬರ್ 288 ಎಂದು ಕೊಟ್ಟಿರುತ್ತಾರೆ. ಅದು 30 ಗುಂಟೆ ಇರುತ್ತದೆ. ಸದರಿ 30 ಗುಂಟೆ ಜಾಗಕ್ಕೆ ಮಡಿವಾಳ ಜನಾಂಗದವರು ಗುರುತು ಮಾಡಿಕೊಂಡು ಬೇಲಿ ಹಾಕಿಕೊಂಡಿರುತ್ತಾರೆ. 2 ನೇ ಆರೋಪಿಯವರ ಹೆಸರಿನಲ್ಲಿ ಇದ್ದ ಜಾಗದಲ್ಲಿ ನಮ್ಮದಾಗಲಿ, ಮಡಿವಾಳ ಜನಾಂಗದವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನಾನು ಘಟನೆ ನಡೆದ ದಿನ ನೀಲಿ ಬಣ್ಣದ ಗೆರೆ ಇರುವ ಶರ್ಟು ಧರಿಸಿದ್ದೆ ಎಂದರೆ ಸರಿ.

11. 1 ನೇ ಆರೋಪಿಯವರ ಕಾರು ಟಾಟಾ ಎಸ್ಟೆಟೇಟ್ ಆಗಿತ್ತು. ಘಟನೆ ನಡೆದ ದಿನ ಕಾರಿನ ಹಿಂಭಾಗದ ಗ್ಲಾಸ್ ಹೊಡೆದು ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಿನ ಘಟನೆ ಸುಮಾರು 30 ನಿಮಿಷಗಳ ಕಾಲ ನಡೆದಿತ್ತು. ಅಲ್ಲಿಯವರೆಗೂ ಪೊಲೀಸರು ಮತ್ತು ಕಂದಾಯ ಅಧಿಕಾರಿಗಳು ಇರಲಿಲ್ಲ. ಘಟನೆಯ ದಿನ ಆರೋಪಿಗಳಿಗೂ ಮತ್ತು ಗ್ರಾಮಸ್ಥರಿಗೂ ಮಾತುಕತೆ ಆಗುವ ಮುನ್ನವೇ ಸದರಿ ಅಧಿಕಾರಿಗಳು ಸ್ಥಳದಿಂದ ಹೋಗಿರುತ್ತಾರೆ. ಸದರಿ ನಂಬರ್ 47 ರಲ್ಲಿ ಇರುವ ಸ್ಮಶಾನ ಜಾಗಕ್ಕೆ ನಾನು ಮತ್ತು ಫ್ರಾಸಾ.2 ಮತ್ತು 3 ಸಂಬಂಧವಿಲ್ಲ ಎಂದರೆ ನಾವು ಗ್ರಾಮಸ್ಥರಾಗಿ ಆ ಜಾಗಕ್ಕೆ ಹೋಗಿದ್ದೆವು. ಸದರಿ ಜಾಗಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳನ್ನು ನಾನು ಸೇರಿದಂತೆ ನಮ್ಮ ಇತರೆ ಗ್ರಾಮಸ್ಥರು ನಡೆಸುತ್ತಿದ್ದೇವೆ ಎಂದರೆ ಸರಿ. ನನ್ನನ್ನು ನಮ್ಮ ಊರಿನವರು ಸಮಾಜ ಸೇವಕ ಮತ್ತು ರೈತ ನಾಯಕ ಎಂದು

ತಿಳಿದುಕೊಂಡಿರುತ್ತಾರೆ. ಹಾಗಾಗಿ ನಾನು ಊರಿನ ಮೂಲ ಬೂತ ಸೌಕರ್ಯಗಳಿಗೆ ಸಂಬಂಧಪಟ್ಟಂತೆ ಮುಂಚೂಣಿಯಲ್ಲಿ ನಿಂತು ಹೊರಾಡುತ್ತೇನೆ ಎಂದರೆ ಸರಿ. ಹಳಕೆರೆ ಮತ್ತು ಮಡ್ಡಿಕೆರೆ ಇವೆರಡು ಅಕ್ಕಪಕ್ಕದವು ಎಂದರೆ ಸರಿ. ಮಡ್ಡಿಕೆರೆಯಲ್ಲಿ ಇದ್ದ ಹಳೆಯ ರಸ್ತೆಯಲ್ಲಿ ಹೊಸ ರಸ್ತೆಯನ್ನು ಮಡ್ಡಿಕೆರೆಗೆ ಹೋಗಲು ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 47 ನಿಂದ 1 ನೇ ಆರೋಪಿಯ ಮನೆಯು ಸುಮಾರು 1 ಕಿ.ಮೀ ವಾಹನದಲ್ಲಿ ಬಂದರೆ ಆಗುತ್ತದೆ. ಕಾಲು ನಡುಗೆಯಲ್ಲಿ ಬಂದರೆ ಅರ್ಧ ಕಿ.ಮೀ ದೂರವಾಗುತ್ತದೆ. ಸರ್ವೆ ನಂಬರ್ 47 ರಿಂದ 2 ನೇ ಆರೋಪಿಯ ಮನೆ ಸುಮಾರು ಒಂದು ಪರ್ಲಾಂಗ ದೂರ ಇರುತ್ತದೆ.

12. ಘಟನೆ ನಡೆದ ದಿನ 1 ನೇ ಆರೋಪಿಯು ಸದರಿ ಕೃತ್ಯ ನಡೆದ ಸ್ಥಳಕ್ಕೆ ಬಂದಿಲ್ಲ ಮತ್ತು ಅಲ್ಲಿ ಉಳಿದ 3 ಆರೋಪಿಗಳು ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯವರ ತೋಟದಲ್ಲಿ ಬೆಳೆದಿದ್ದ ಕಾಫಿ ಬೆಳೆಗಳನ್ನು ನಾನು ಸೇರಿದಂತೆ ಇತರ 11 ಜನ ಹೋಗಿ ನಷ್ಟ ಮಾಡಿದ್ದರ ಕುರಿತು ನಮ್ಮ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನನ್ನ ಮೇಲೆ ಪ್ರಕರಣ ದಾಖಲಾಗಿದ್ದು ಪ್ರಕರಣದ ಆರೋಪವನ್ನು ಕೇಳಿ ತಿಳಿದುಕೊಂಡಿದ್ದಿರಾ ಎಂದರೆ ಅದು ಆಗಿ 5 ವರ್ಷವಾಯಿತು ನನಗೆ ನೆನಪಿರುವುದಿಲ್ಲ. ನನಗೆ ಮೂಡಿಗೆರೆ ನ್ಯಾಯಾಲಯದಲ್ಲಿ ನನ್ನ ಮೇಲೆ ಇರುವ ಪ್ರಕರಣದಲ್ಲಿ ಆರೋಪ ಪಟ್ಟಿಯ ಪ್ರತಿಯನ್ನು ನೀಡಿದ್ದು ಅದನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಈಗ 5 ವರ್ಷವಾಯಿತು ನನಗೆ ನೆನಪಿರುವುದಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ. ಘಟನೆ ನಡೆದ ದಿನ 1 ನೇ ಆರೋಪಿಯು ನಮ್ಮನ್ನು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಮತ್ತು

ನಮ್ಮ ಮೇಲೆ ತನ್ನ ವಾಹನವನ್ನು ಹತ್ತಿಸಲಿಕ್ಕೆ ಬರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು ವಯೋ ಸಹಜದಿಂದ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದ ದಿನ 1 ನೇ ಆರೋಪಿಯು 2 ನೇ ಆರೋಪಿಗೆ ಮನೆಯಿಂದ ಕತ್ತಿಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದ್ದನ್ನು ಮೊದಲಬಾರಿಗೆ ನಾನು ಈ ದಿನ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ್ದು ಅದರಿಂದ ನನ್ನ ಕೈ ಬೆರಳುಗಳಿಗೆ ಗಾಯವಾಗಿದ್ದು ಸುಳ್ಳು ಎಂದರೆ ಸರಿಯಲ್ಲ. ನನಗೂ ಸಹ ಕಾಫಿ ತೋಟ ಇರುತ್ತದೆ. ಸದರಿ ಗಾಯವು ನನ್ನ ತೋಟದಲ್ಲಿ ಕೆಲಸ ಮಾಡುವಾಗ ಆಗಿದ್ದು ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮೊಣಕಾಲಿನ ಚಿಪ್ಪಿಗೆ ದೊಣ್ಣೆಯಿಂದ ಮತ್ತು ನನ್ನ ತಮ್ಮ ಪ್ರಾಸಾ.2 ರವರ ಪಾದಕ್ಕೆ ದೊಣ್ಣೆ ಮತ್ತು ಕತ್ತಿಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯು ನಮಗೆ ಕೋವಿಯಿಂದ ನಮ್ಮನ್ನು ಕೊಲ್ಲುತ್ತೇನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

13. ಆ ದಿನ ಹಲ್ಲೆಯಿಂದ ನನ್ನ ಶರ್ಟ್ ಗೆ ರಕ್ತ ಕಲೆಯಾಗಿದ್ದು ಅದು ಈಗ ನ್ಯಾಯಾಲಯದ ಮುಂದೆ ತೋರಿಸಿದ ಶರ್ಟು ಅಲ್ಲ ಎಂದರೆ ಸರಿಯಲ್ಲ. ನಿ.ಪಿ.2 ರ ಮಹಜರ್ ನಲ್ಲಿ ನನ್ನ ಸಹಿ ಇರುವುದಿಲ್ಲ. ಸದರಿ ನಿ.ಪಿ.2 ನ್ನು ಮಾಡುವ ಸಮಯದಲ್ಲಿ ನಾನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದೆನು. ನಾನು 1 ನೇ ಆರೋಪಿ ಪ್ರಸನ್ನ ರವರ ಮೇಲೆ ದ್ವೇಷದಿಂದ ನನ್ನ ಬೇರೆ ಶರ್ಟು ನ್ನು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ.1

ಮತ್ತು 2 ರಲ್ಲಿ ಸಮಾನ್ಯವಾಗಿ ಕಾಫಿ ಬೆಳೆಯುವ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಮು.ಮಾ.3 ದೊಣ್ಣೆಯುವ ಯಾವ ಜಾತಿಯ ಮರದು ಎಂದು ನಿ.ಪಿ.2 ಮಹಜರ್ ನಲ್ಲಿ ನಮೂದು ಮಾಡಿದ್ದರ ಕುರಿತು ನನಗೆ ಗೊತ್ತಿಲ್ಲ. ಸದರಿ ಮು.ಮಾ.1 ರಿಂದ 4 ನ್ನು ಪೊಲೀಸರು 2 ನೇ ಆರೋಪಿಯ ಮನೆಯಿಂದ ವಶಪಡಿಸಿಕೊಂಡಿರುತ್ತಾರೆ.

14. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವು 1 ನೇ ಆರೋಪಿ ರವರ ಮೇಲಿನ ದ್ವೇಷದಿಂದ ನಾವೆಲ್ಲರು ಸೃಷ್ಟಿಸಿಕೊಂಡು ಹೇಳಿದ್ದು ಎಂದರೆ ಸರಿಯಲ್ಲ. 2 ನೇ ಆರೋಪಿಗೆ ಮಂಜೂರಾಗಿದ್ದ ಜಾಗವನ್ನು ನಾನು ಮತ್ತು ನನ್ನ ಸಹೋದರರಾಗಿ ಫ್ರಾಸಾ.2 ಮತ್ತು 3 ರವರು ಸೇರಿ ಅದನ್ನು ಅಕ್ರಮವಾಗಿ ಪಡೆಯುವ ಸಲುವಾಗಿ 2 ನೇ ಆರೋಪಿ ಮತ್ತು ಅವರ ಕುಟುಂಬದವರ ಹೆಸರನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನೆ ನಡೆದ ದಿನ 1 ಮತ್ತು 2 ನೇ ಆರೋಪಿಗಳ ಮೇಲೆ ಕಂದಾಯ ಅಧಿಕಾರಿ ಮತ್ತು ಪೊಲೀಸರ ಎದುರಿನಲ್ಲಿ ಹಲ್ಲೆ ಮಾಡಿದ್ದು ರೈತ ಸಂಗಟನೆಯ ಹೆಸರಿನ ಬಲದಿಂದ ಸದರಿ ಆರೋಪಿಗಳ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾ